**ಪಿ.ಡಬ್ಲ್ಯು-01 – ರಾಜು**

**<u>ಸಾಕ್ಷಿಯನ್ನು ದಿನಾಂಕಃ 01.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಎಸ್.ಎಂ. ವಕೀಲರಿಂದಃ</u>**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ಆಂಬ್ಯುಲೆನ್ಸ್ ಡ್ರೈವರ್ ಆಗಿ ಕೆಲಸ ಮಾಡಿಕೊಂಡಿರುತ್ತೇನೆ. ನಾನು 2023 ನೇ ಇಸವಿಯಲ್ಲಿ ವ್ಯವಸಾಯ ಮಾಡಿಕೊಂಡಿದ್ದೆನು. ಈ ಪ್ರಕರಣವನ್ನು ದಾಖಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆಂಬ್ಯುಲೆನ್ಸ್ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದ ಬಗ್ಗೆ ತಿಳಿಸಿರುವುದಿಲ್ಲವೆಂದರೆ ಸರಿ. ನಾನು 2023 ನೇ ಇಸವಿಯಲ್ಲಿ ವ್ಯವಸಾಯ ಮಾಡಿಕೊಂಡಿರುವ ಬಗ್ಗೆ ಸದರಿ ವ್ಯವಸಾಯದ ಜಮೀನಿನ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ಕುಟುಂಬದ ನಿರ್ವಹಣೆಯನ್ನು ನಾನೇ ಮಾಡುತ್ತಿದ್ದೇನೆಂದರೆ ಸರಿ. ನನಗೆ ವ್ಯವಸಾಯದಿಂದ ವಾರ್ಷಿಕವಾಗಿ ಸುಮಾರು ರೂ. 10,00,000/- ರಿಂದ ರೂ. 12,00,000/- ಆಧಾಯ ಬರುತ್ತದೆ. ಸದರಿ ವ್ಯವಸಾಯಕ್ಕೆ ನಾನು ವಾರ್ಷಿಕವಾಗಿ ಸುಮಾರು ರೂ. 4,00,000/- ರಿಂದ ರೂ. 4,50,000/- ಲಕ್ಷ ಖರ್ಚು ಮಾಡುತ್ತೇನೆ. ನನಗೆ ವ್ಯವಸಾಯದ ಸುಮಾರು 04 ಎಕರೆ ಜಮೀನು ಇರುತ್ತದೆ. ನನ್ನ ಬಳಿ ಬಿ.ಪಿ.ಎಲ್. ಪಡಿತರ ಚೀಟಿ ಇರುತ್ತದೆಂದರೆ ಸರಿ. ನಾನು ಹೆಚ್.ಡಿ. ಕೋಟೆಯ ಬ್ಯಾಂಕ್ ಆಫ್ ಬರೋಡಾದಲ್ಲಿ ಖಾತೆ ಹೊಂದಿರುತ್ತೇನೆ. ನಾನು ಸದರಿ ಖಾತೆಗೆ ಸಂಬಂಧಿಸಿದ ವ್ಯವಹಾರದ ಸ್ಟೇಟ್ ಮೆಂಟ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಆರೋಪಿಗೆ ದಿನಾಂಕಃ 05.01.2023 ರಂದು ಸಾಲ ನೀಡಿರುತ್ತೇನೆ. ನಾನು ಆರೋಪಿಗೆ ಸಾಲವನ್ನು ನೀಡುವ ಸಮಯದಲ್ಲಿ ನಾನು ಹಾಗು ಆರೋಪಿ ಮಾತ್ರ ಇದ್ದಿರುತ್ತೇವೆ. ನಾನು ಆರೋಪಿಗೆ

ಸಾಲವನ್ನು ಮಧ್ಯಾಹ್ನ ಸುಮಾರು 12.00 ಗಂಟೆಯ ಹೊತ್ತಿಗೆ ನೀಡಿರುತ್ತೇನೆ. ನಾನು ಆರೋಪಿಗೆ ಸದರಿ ಸಾಲದ ಹಣವನ್ನು ನಮ್ಮ ಮನೆಯಲ್ಲಿ ನೀಡಿರುತ್ತೇನೆ. ಅದು ವಾರದ ಯಾವ ದಿನ ಎಂದು ನನಗೀಗ ನೆನಪಿರುವುದಿಲ್ಲ. ನಾನು ಆರೋಪಿ ಸಾಲ ಕೇಳಿದ 04-05 ದಿನಗಳ ನಂತರ ಆರೋಪಿಗೆ ಸಾಲ ನೀಡಿರುತ್ತೇನೆ. ಆರೋಪಿಯು ದಿನಾಂಕಃ 31.12.2022 ರಂದು ಸಾಲ ಕೇಳಲು ಬಂದಿರುತ್ತಾರೆ. ನಾನು ಆರೋಪಿಗೆ ಸಾಲ ನೀಡಿದಾಗ ಅವರಿಂದ ಯಾವುದೇ ಬರವಣಿಗೆ ಮಾಡಿಸಿಕೊಂಡಿರುವುದಿಲ್ಲ. ನಾನು ಆ ರೀತಿ ಆರೋಪಿಗೆ ಸಾಲ ನೀಡಿದ ವಿಚಾರವನ್ನು ಅವರ ಗಂಡನಿಗೆ ತಿಳಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನನಗೆ ಅವರ ಗಂಡನ ಪರಿಚಯ ಅಷ್ಟೊಂದು ಇರುವುದಿಲ್ಲವೆಂದು ನುಡಿಯುತ್ತಾರೆ. ನನ್ನ ಹೆಂಡತಿ ಅಂತರಸಂತೆ ಗ್ರಾಮದ ಅಂಗನವಾಡಿಯಲ್ಲಿ ಕಾರ್ಯಕರ್ತೆಯಾಗಿದ್ದು ಆಕೆಯ ಮೂಲಕ ನನಗೆ ಆರೋಪಿ ಪರಿಚಿತರಾಗಿರುತ್ತಾರೆ. ಆರೋಪಿ ನನಗೆ ಕಳೆದ ಸುಮಾರು 05 ವರ್ಷಗಳಿಂದ ಪರಿಚಿತರು. ನಾನು ಆರೋಪಿಯ ಮನೆಗೆ ಹೋಗುವುದು-ಬರುವುದು ಮಾಡಿಸಿರುವುದಿಲ್ಲ. ಆರೋಪಿಯು ನಾಗನಹಳ್ಳಿ ಗ್ರಾಮದವರಾಗಿದ್ದು ಆ ವಿಚಾರವನ್ನು ನನ್ನ ಹೆಂಡತಿಯ ಮೂಲಕ ತಿಳಿದುಕೊಂಡಿರುತ್ತೇನೆ. ಸಾಲವನ್ನು ನೀಡಲು ಸರ್ಕಾರದಿಂದ ಲೈಸೆನ್ಸ್ ಪಡೆದಿದ್ದೀರಾ ಎಂದರೆ ಸಾಕ್ಷಿಯು ಆರೋಪಿಯು ತನಗೆ ಸಮಸ್ಯೆ ಇರುವುದಾಗಿ ತಿಳಿಸಿ ಸಾಲ ಕೇಳಿದ್ದು ಪರಿಚಯದ ಹಿನ್ನೆಲೆಯಲ್ಲಿ ಅವರಿಗೆ ಸಾಲ ನೀಡಿರುತ್ತೇನೆಂದು ನುಡಿಯುತ್ತಾರೆ. ಆರೋಪಿಗೆ ಸಾಲ ನೀಡಿದ್ದ ಸಮಯದಲ್ಲಿ ನನ್ನ ಬಳಿ ಅಷ್ಟು ಹಣ ಇರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಆರೋಪಿಯ ಗಂಡನ ಹೆಸರು ಜೋಸೆಫ್ ರಾಜು ಎಂಬುದಾಗಿದ್ದು ಸದರಿ ವಿಚಾರವನ್ನು ಸಹ ನನ್ನ ಹೆಂಡತಿಯ ಮೂಲಕ ತಿಳಿದುಕೊಂಡಿರುತ್ತೇನೆ. ಆರೋಪಿಯು ತಾನು ಪಡೆದ ಸಾಲವನ್ನು 03 ತಿಂಗಳಲ್ಲಿ

ಹಿಂತಿರುಗಿಸುವುದಾಗಿ ತಿಳಿಸಿ ಸಾಲ ಪಡೆದಿರುತ್ತಾರೆ. ಆ ರೀತಿ ಒಪ್ಪಿಕೊಂಡ ಸಮಯ ಕಳೆದ ನಂತರ ಆರೋಪಿಯನ್ನು ಭೇಟಿಯಾಗಿ ಸಾಲದ ಹಣವನ್ನು ಹಿಂತಿರುಗಿಸುವಂತೆ ಕೇಳಿದ್ದು ಆಗ ಅವರು ನನಗೆ ನಿ.ಪಿ.–1 – ಚೆಕ್ ಅನ್ನು ನೀಡಿರುತ್ತಾರೆ. ಆರೋಪಿ ನನಗೆ ದಿನಾಂಕಃ 04.03.2023 ರಂದು ಅಂಕನಾಥಪುರದ ಅಂಗನವಾಡಿಯ ಬಳಿ ನಿ.ಪಿ.–1 – ಚೆಕ್ ಅನ್ನು ನೀಡಿರುತ್ತಾರೆ. ನಾನು ನಾಗನಹಳ್ಳಿ ಗ್ರಾಮಕ್ಕೆ ಹೋಗಿರಲಿಲ್ಲ ಎಂದರೆ ಸರಿ. ಆರೋಪಿಯ ಮೊಬೈಲ್ ನಂಬರ್ ನನಗೆ ನೆನಪಿರುವುದಿಲ್ಲ. ಆರೋಪಿಗು ಹಾಗು ನನಗು ಯಾವುದೇ ಪರಿಚಯ ಇರುವುದಿಲ್ಲ ಹಾಗು ದೂರಿನಲ್ಲಿ ತಿಳಿಸಿರುವಂತೆ ನನ್ನ ಹಾಗು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿ ಕೊಟ್ಟ ಚೆಕ್ ಅಮಾನ್ಯಗೊಂಡ ನಂತರ ಆರೋಪಿಗೆ 02 ನೋಟೀಸ್ ಕಳುಹಿಸಿರುತ್ತೇನೆ. ಮೊದಲ ನೋಟೀಸ್ ಅನ್ನು ದಿನಾಂಕಃ 15.03.2023 ರಂದು ನೀಡಿರುತ್ತೇನೆ. ಇನ್ನೊಂದು ನೋಟೀಸ್ ಅನ್ನು ಯಾವ ದಿನಾಂಕದಂದು ನೀಡಿರುತ್ತೇನೆಂದು ನೆನಪಿರುವುದಿಲ್ಲ. ಸದರಿ ನೋಟೀಸ್ ಗಳು ನನ್ನ ವಕೀಲರ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲವೆಂದರೆ ಸಾಕ್ಷಿಯು ನಾನು ಹಾಜರುಪಡಿಸಿರುವುದಿಲ್ಲ ಅದು ವಕೀಲರಿಗೆ ಗೊತ್ತಿರುತ್ತದೆಂದು ನುಡಿಯುತ್ತಾರೆ. ಸದರಿ 02 ನೋಟೀಸ್ ಗಳನ್ನು ಆರೋಪಿಯ ನಾಗನಹಳ್ಳಿ ವಿಳಾಸಕ್ಕೆ ಕಳುಹಿಸಿರುತ್ತೇನೆ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**
**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**